# MUTTINA TENE

# ಮುತ್ತಿನ ತೆನೆ

( ಸಂಶೋಧನಾ ಲೇಖನಗಳ ಗುಚ್ಛ)




–ಡಾ. ಪ್ರಕಾಶ ಎನ್. ನರಗುಂದ

Dr Prakash N Naragund

# MUTTINA TENE

# ಮುತ್ತಿನ ತೆನೆ

ಸಂಪಾದಕರು

**ಡಾ. ಪ್ರಕಾಶ ಎನ್. ನರಗುಂದ**

Editor:Dr Prakash N Naragund

ಪ್ರಕಾಶಕರು

**ವೈಭವ ಪಬ್ಲಿಕೇಷನ್ಸ್, ಗದಗ**

PRINCIPAL,
M.G.V.C. Arts, Commerce & Science College
MUDDEBIHAL-586212. Dist: Vijayapur.

Co-ordinator,
Internal Quality Assurance Ce
M.G.V.C. Arts, Commerce & Science Coll
MUDDEBIHAL-586212. Dist: Vijayap

**Muttin Tene** - A Collection of Articles compiled by Dr. Prakash N. Naragund, Asst. Professor, Dept. of Kannada, M. G. V. C. Degree College, Muddebihal, Dist : Vijayapur. Tel : 9986767832

Published By : **VAIBHAV PUBLICATIONS**
Near Vatsalya Hospital
Vidyanagar, Masari,
GADAG-582101
Size : 1/8 Demy
Pages : 256 (xii+244)
Paper Used : 70 GSM N. S. Maplitho
© : Author
First Edition : 2021
Copies : 500
Price Rs : Rs. 250/-
ISBN NO : 978-81-947130-3-6

**ಮುತ್ತಿನ ತೆನೆ**
ಸಂಪಾದಕರು : **ಡಾ. ಪ್ರಕಾಶ ಎನ್. ನರಗುಂದ**
ಕನ್ನಡ ಉಪನ್ಯಾಸಕರು,
ಎಮ್.ಜಿ.ವಿ.ಸಿ. ಪದವಿ ಕಾಲೇಜು, ಮುದ್ದೇಬಿಹಾಳ
ಜಿ: ವಿಜಯಪುರ ಫೋನ : 9986767832
ಪ್ರಕಾಶಕರು : **ವೈಭವ ಪಬ್ಲಿಕೇಷನ್ಸ್, ಗದಗ**
ವಾತ್ಸಲ್ಯ ಆಸ್ಪತ್ರೆ ಹತ್ತಿರ,
ವಿದ್ಯಾನಗರ, ಮಸಾರಿ,
ಗದಗ-582101
ಹಕ್ಕುಗಳು : ಲೇಖಕರದು
ಪುಟಗಳು : 256 (xii+244)
ಪ್ರಥಮ ಮುದ್ರಣ : 2021
ಪ್ರತಿಗಳು : 500
ಬೆಲೆ : ರೂ.250/-
ಕಾಗದ : 70 ಜಿಎಸ್ಎಂ ಎನ್. ಎಸ್. ಮ್ಯಾಪಲಿಥೊ
ಐ. ಎಸ್. ಬಿ. ಎನ್. ನಂ : 978-81-947130-3-6
ಮುದ್ರಣ : ಜೆ. ಪಿ. ಪ್ರಿಂಟ್ಸ್, ಗದಗ. 9886708168

# ಪರಿವಿಡಿ


| | | |
|---|---|---|
| ಕನ್ನಡ ರಂಗಭೂಮಿ ಜನಪದ ವಾದ್ಯಗಳು | | 1 |
| | – ಡಾ. ಎಸ್. ಎಸ್. ಪಾಟೀಲ | |
| "ಮುದ್ದೇಬಿಹಾಳ ತಾಲೂಕಿನ ದೇವಾಲಯಗಳು" | | 5 |
| | – ಡಾ. ರಾಮು ಹಸನಪ್ಪ ಸಜ್ಜನ | |
| ದಾರ್ಶನಿಕ ವಿಶ್ವಗುರು ಬಸವಣ್ಣ | – ಪ್ರೊ. ಎಂ. ಎ. ಬಿರಾದಾರ | 15 |
| ಭಾಷಾಂತರ ನಡೆದು ಬಂದ ದಾರಿ | – ಡಾ. ಎಂ.ನಂಜುಂಡಸ್ವಾಮಿ | 18 |
| ಮಮದಾಪೂರ ಗ್ರಾಮ ಚರಿತ್ರೆ | – ಡಾ. ನಾಗರಾಜ ಡಿ. ಮುರಗೋಡ | 24 |
| ಹಸ್ತಪ್ರತಿಗಳು: ಹಾಗೆಂದರೇನು? | – ಡಾ. ಸುರೇಶ ಹನಗಂಡಿ | 31 |
| A STUDY ON FOLK GAMES OF BAGALKOT DISTRICT | | 43 |
| | - H.G. PATIL | |
| GREEN BEE-EATER | - Sri. S.V.Gurumath | 48 |
| ಅಲ್ಬರ್ಟ್ ಐನ್‌ಸ್ಟೈನ್ : ವಿಶೇಷ ಸಾಪೇಕ್ಷತಾ ಸಿದ್ಧಾಂತ | | 53 |
| | – ಪ್ರೊ.ಎಸ್.ಎಮ್. ನಿಂಬಲಗುಂದಿ | |
| ವಿಜ್ಞಾನ ಕ್ಷೇತ್ರದಲ್ಲಿ ಅಣುಶಕ್ತಿ | – ಪ್ರೋ. ಸಿ.ಎಸ್. ಕಟಗೇರಿ | 56 |
| 'ಬುಡಕಟ್ಟು ಧರ್ಮ'ದ ಅಸ್ಮಿತೆ | – ಡಾ. ಆನಂದಪ್ಪ ಬಿ. ಎಚ್(ಜೋಗಿ) | 59 |
| ಕಂದಗಲ್ಲ ಹನಮಂತರಾಯರ 'ರಕ್ತರಾತ್ರಿ'– ಸಾಂಸ್ಕೃತಿಕ ಅಧ್ಯಯನ | | 70 |
| | – ಶ್ರೀ ಚಂದ್ರಶೇಖರ ಹೆಗಡೆ | |
| ಹೈದರ ಅಲಿ ಹಾಗೂ ಟೀಪು ಕಾಲದ ಉರ್ದು ಮತ್ತು ಪರ್ಷಿಯನ್ ಸಾಹಿತ್ಯ | | 82 |
| | – ಡಾ. ಸುಮಂಗಲಾ. ಅಂಗಡಿ | |
| Globalization and its Impact on Higher Education | | 92 |
| | - Dr.Sunita B Jadhav | |
| "ವಚನ ಸಾಹಿತ್ಯದಲ್ಲಿ ಮೂಡಿಬಂದ ಕಾಯಕ ತತ್ವ" | | 100 |
| | – ಶ್ರೀ ಮಹಾದೇವಪ್ಪ ಕೊಪ್ಪದ | |
| NSS: Source of Knowledge to the Students | | 106 |
| | - Prof. S.R.Hatti<br>- Prof R.P.Jadhav<br>- Prof.M.I.Biradar | |
| ಲೀಥಿಯಮ್–Li | – ಎ.ಎಸ್.ಬಾಗವಾನ | 111 |
| ಭಾರತ ಸಂವಿಧಾನದ ಒಳನೋಟ | – ಪ್ರೊ. ಎ.ಬಿ.ಕುಲಕರ್ಣಿ | 115 |
| Economic Slowdown in Indian: | - Dr. B. A. Guli | 121 |
| ಶ್ರೀಕೃಷ್ಣ ಪಾರಿಜಾತ ಪರಂಪರೆ ಮತ್ತು ಕಲಾವಿದರು | | 128 |
| | – ಡಾ.ರಾಜು ಕಂಬಾರ | |


M.G.V.C. Arts, Commerce & Science MUDDEBIHAL -586212 Dt: Vijayapur

M.G.V.C. Arts, Commerce & Science College MUDDEBIHAL-586212 Dt: Vijayapur

Muddebihal Talukina Devalayagalu

# ಮುದ್ದೇಬಿಹಾಳ ತಾಲೂಕಿನ ದೇವಾಲಯಗಳು

**ಡಾ. ರಾಮು ಹಸನಪ್ಪ ಸಜ್ಜನ**
ಸಹಾಯಕ ಪ್ರಾಧ್ಯಪಕರು, ಎಂ.ಜಿ.ವ್ಹಿ.ಸಿ.ಪದವಿ ಮಹಾವಿದ್ಯಾಲಯ
ಮುದ್ದೇಬಿಹಾಳ. ಮೋ. ನಂ. :೯೮೪೫೪೫೪೬೭೪
Dr Ramu Hasanappa Sajjan, Assistant Professor,
MGVC Degree College,Muddebihal,Ph.No.9845454674

ಮುದ್ದೇಬಿಹಾಳ ತಾಲೂಕ ಜಿಲ್ಲಾ ಕೇಂದ್ರವಾದ ವಿಜಯಪೂರದಿಂದ ೮೦ ಕಿ. ಮೀ ದೂರದಲ್ಲಿ ಆಗ್ನೇಯಕ್ಕೆ ಕೃಷ್ಣಾನದಿಯ ತಟಕ್ಕೆ ಹತ್ತಿರದಲ್ಲಿದೆ. ಮುದ್ದೇಬಿಹಾಳ ತಾಲೂಕಿನ ಪ್ರಮುಖ ನದಿಯೆಂದರೆ ದೋಣಿ ನದಿ. ತಾಳಿಕೋಟೆ ನಾಲತವಾಡ ಮತ್ತು ಢವಳಗಿ ಹೊಬಳಿಗಳನ್ನು ಹೊಂದಿರುವ ಮುದ್ದೇಬಿಹಾಳ, ಸಿಂದಗಿ, ಬಸವನ ಬಾಗೇವಾಡಿ, ಸುರಪೂರ ತಾಲೂಕುಗಳ ಮೇರೆಯನ್ನು ಹಂಚಿಕೊಂಡಿದೆ.

ಮುದ್ದೇಬಿಹಾಳವು ಮೂರು ಕಡಿದಾದ ದಿಬ್ಬಗಳ ಮೇಲೆ ನೆಲೆಸಿದ ಊರು, ಮುದ್ದೇಬಿಹಾಳ, ಮುದ್ದಹಾಳ, ಮುದ್ದೆ, ಮುದ್ದೇಬಿಹಾಳ ಆಗಿದೆ ಎಂದು ಖ್ಯಾತ ಸಾಹಿತಿಗಳಾದ ಶ್ರೀ. ರಂ. ಶಿ. ಮುಗಳಿರವರು ಅಭಿಪ್ರಾಯ ಪಟ್ಟಿದ್ದಾರೆ. ಕನ್ನಡ ನಾಡಿನ ಪ್ರಸಿದ್ಧ ಸಂಶೋಧಕರಾದ ಡಾ:: ಎಂ. ಎಂ. ಕಲಬುರ್ಗಿಯವರು ಮುದ್ದಬ್ಬೆ, ಪಾಳ್ಯವೇ, ಮುದ್ದೇಬಿಹಾಳ ಆಗಿರಬೇಕೆಂದು ಉಲ್ಲೇಖಿಸಿದ್ದಾರೆ. ಮುದ್ದೇಬಿಹಾಳ ತಾಲೂಕಿನ ದೇವಾಲಯಗಳು ಎಂಬ ಲೇಖನದಲ್ಲಿ ಭೌಗೋಳಿಕ ಲಕ್ಷಣ, ರಾಜಕೀಯ ಚರಿತ್ರೆ, ಐತಿಹಾಸಿಕ ಮಹತ್ವ, ದೇವಾಲಯಗಳ ಸಾಂಸ್ಕೃತಿಕ ಪರಂಪರೆ, ವಾಸ್ತುಶಿಲ್ಪ ಮತ್ತು ಶಾಸನೋಕ್ತ ದೇವಾಲಯಗಳನ್ನು ವಿಶ್ಲೇಷಣೆ ಮತ್ತು ಅವುಗಳ ಮುಖ್ಯ ಲಕ್ಷಣಗಳನ್ನು ಚಿತ್ರಿಸಲಾಗಿದೆ.

ಈ ತಾಲೂಕ ಭೌಗೋಳಿಕವಾಗಿ ಸಮುದ್ರರ ಮಟ್ಟದಿಂದ ೧೬೫೦ ರಿಂದ ೧೮೫೦ ಅಡಿ ಎತ್ತರದಲ್ಲಿದೆ. ವಿಸ್ತೀರ್ಣವು ೧೫೦೨ ಚ.ಕಿ. ಮೀ ಇಲ್ಲವೇ ೧೪೯೭೪೪ ಚದುರ ಹೆಕ್ಟರ್ ಭೂ-ಪ್ರದೇಶವನ್ನು ಹೊಂದಿದ ೫ ನೇ ದೊಡ್ಡ ತಾಲೂಕು ಕೇಂದ್ರವಾಗಿದೆ. ೧೫೭ ಜನವಸತಿ ಗ್ರಾಮಗಳು ೮ ಜನವಸತಿ ರಹಿತ ಗ್ರಾಮಗಳು ಅಂದರೆ ಪ್ರವಾಹದಲ್ಲಿ ಮುಳಗಡೆ ಗ್ರಾಮಗಳು ೨ ಪಟ್ಟಣಗಳು ಹಾಗೂ

M.G.V.C. Arts, Commerce & Sc... MUDDEBIHAL -586212 Dt: Vijayapur

೩೧ ಗ್ರಾಮ ಪಂಚಾಯತಗಳು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ತಾಲೂಕಿನಲ್ಲಿ ೨೫೮೮೨೧ ಜನ ಸಂಖ್ಯೆ ಇದ್ದು. ೧೩೦೭೬೬ ಪುರುಷರು ಹಾಗೂ ೧೨೮೦೫೫ ಮಹಿಳೆಯರು ಇದ್ದು, ಜನಸಾಂದ್ರತೆಯು ಪ್ರತಿ ಚದುರ ಕಿ. ಮೀಗೆ ಸುಮಾರು ೧೬೯ ಇರುತ್ತದೆ. ತಾಲೂಕಿನಲ್ಲಿ ಹಿಂದು, ಇಸ್ಲಾಂ, ಜೈನ, ಧರ್ಮಿಯರು ವಾಸಿಸತ್ತಿದ್ದು, ಬಹುಮುಖ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ.

## ರಾಜಕೀಯ ಚರಿತ್ರೆ :

ಮುದ್ದೇಬಿಹಾಳ ತಾಲೂಕಿನ ಶಾಸನೋಕ್ತ ದೇವಾಲಯಗಳು ಅವಲೋಕಿಸಿದಾಗ ೩೯ ಗ್ರಾಮಗಳಲ್ಲಿ ೭೩ ಶಾಸನಗಳು ಡಾ: ಎಂ. ಎಂ. ಕಲಬುರ್ಗಿಯವರು ವಿಜಾಪೂರ ಜಿಲ್ಲೆಯ ಶಾಸನ ಸೂಚಿಯಲ್ಲಿ ಪ್ರಕಟಿಸಿದ್ದಾರೆ. ಅವುಗಳು ೧೯೨೯–೧೯೩೦ ರಲ್ಲಿ ಸಮೀಕ್ಷೆಯನ್ನು ಮಾಡಲಾಗಿ ಕಲ್ಯಾಣದ ಚಾಲೂಕ್ಯರ ೧೫, ಯಾದವ ಅರಸರ ೧೦ ಕಲಚೂರಿಗಳ ೩ ಖಿಲ್ಜಿ ಸುಲ್ತಾನರ ೪ ಶಾಸನಗಳ ಪ್ರಕಟಗೊಂಡಿದ್ದು. ೪೧ ಶಾಸನಗಳು ಯಾವ ಅರಸರ ಮನೆತನದ ಉಲ್ಲೇಖ ಇರುವುದಿಲ್ಲ. ಬದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು ದೇವಗಿರಿಯಾದವರು ನೊಳಂಬರು. ಖಿಲ್ಜಿ ಮನೆತನದವರು. ವಿಜಾಪೂರ ಆದಿಲ್ ಶಾಹಿಗಳು ಹಾಗೂ ಮರಾಠಾ, ಪೇಶ್ವೆಗಳು ಈ ಪ್ರದೇಶವನ್ನು ಆಳ್ವಿಕೆ ಮಾಡಿದ ಬಗ್ಗೆ ತಿಳಿದು ಬರುತ್ತದೆ.

## ಬದಾಮಿ ಚಾಲುಕ್ಯರು :

ಬದಾಮಿ ಚಾಲೂಕ್ಯ ರಾಜಧಾನಿ ವಾತಾಪಿ, (ವಾತಾಪಿಪುರ) ದಕ್ಷಿಣ ಫಥೆಶ್ವರನೆಂದು ಬಿರುದಾಂಕಿತನಾದ ಇಮ್ಮಡಿ ಪುಲಕೇಶಿಯ ಆಡಳಿತದಲ್ಲಿ ನರ್ಮದೆಯಿಂದ ದಕ್ಷಿಣಕ್ಕಿರುವ ಇಡೀ ದಕ್ಷಿಣ ಭಾರತವು ಪುಲಕೇಶಿಯ ಸಾಮ್ರಾಜ್ಯದಲ್ಲಿ ವಿಲೀನವಾಗಿತ್ತು ತನ್ನ ಚಿಕ್ಕಪ್ಪನಾದ ಮಂಗಳೇಶನನ್ನು ಕೊಂದಾಗ ಅವನ ಮಂಡಳಿಕನಾದ ರಾಷ್ಟ್ರಕೂಟರ ಅಪ್ಪಾಯಿಕ ಮತ್ತು ಗೋವಿಂದರನ್ನು ಭೀಮಾನದಿ ದಡದಲ್ಲಿ ಸೋಲಿಸಿದ ನೆಂಬರು ಶಾಸನಾಧಾರಗಳಿಂದ ತಿಳಿದು ಬರುತ್ತದೆ. ಆದ್ದರಿಂದ ಪ್ರದೇಶವು ಚಾಳುಕ್ಯರ ಆಡಳಿಕ್ಕೆ ಒಳ ಪಟ್ಟಿರ ಬಹುದೆಂದು ಊಹಿಸಲಾಗಿದೆ. ಆದರೆ ಮುದ್ದೇಬಿಹಾಳ ತಾಲೂಕಿನಲ್ಲಿ ಬದಾಮಿ ಚಾಲುಕ್ಯರ ಯಾವುದೆ ಶಾಸನಗಳು ಲಭಿಸಿರುವುದಿಲ್ಲ.

## ರಾಷ್ಟ್ರ ಕೂಟರು :

ಮುದ್ದೇಬಿಹಾಳ ಪ್ರದೇಶದಲ್ಲಿ ರಾಷ್ಟ್ರಕೂಟ ಅರಸರ ಶಾಸನಗಳಾಗಲಿ, ದೇವಾಲಯಗಳಾಗಲಿ ಗೊಚರಿಸುವುದಿಲ್ಲ ಆದರೆ ನೆರೆಯ ಬಾಗೇವಾಡಿ ತಾಲೂಕಿನ ಜಾಯವಾಡಗಿಯಲ್ಲಿ ರಾಷ್ಟ್ರಕೂಟರ ಕಾಲದ ದೇವಾಲಯವಿದೆ. ಆದರೆ ಈ

M.G.V.C. Arts, Commerce & Science College MUDDEBIHAL -586212 Dt: Vijayapur.

ಪ್ರದೇಶದಲ್ಲಿ ಯಾವುದೇ ಶಾಸನಗಳು ಲಭ್ಯವಿರುವುದಿಲ್ಲ ಆದರೂ ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿರಬಹುದು ಎಂದು ಊಹಿಸಬಹುದು.

## ಕಲ್ಯಾಣದ ಚಾಲುಕ್ಯರು :

ಈ ತಾಲೂಕ ಪ್ರದೇವು ಕಲ್ಯಾಣದ ಚಾಲುಕ್ಯರ ಆಡಳಿತಕ್ಕೆ ಒಳಪಟ್ಟಿತ್ತು ಎಂದು ಹೇಳಲು ಸಾಕಷ್ಟು ಪ್ರಮಾಣದ ದೇವಾಲಯಗಳು ಮತ್ತು ಶಾಸನಗಳೆ ಸಾಕ್ಷಿಯಾಗಿವೆ ತುಂಬಿಗೆಯ ಕ್ರಿ. ಶ. ೧೦೦೪ ಕಲ್ಯಾಣದ ಚಾಲುಕ್ಯರ ಮೊದಲು ಶಾಸನವಾಗಿದ್ದು. ಇರುವೆ ಬೆಡಂಗ ಸತ್ಯಾಶ್ರಯನ ಕಾಲದಲ್ಲಿ ಸ್ಥಾಪಿಸಲಾಗಿದೆ. ಪಗಲಟ್ಟಿ ೩೦೦ ರ ಅಗ್ರಹಾರ ತುಂಬಿಗೆಯನ್ನಾಳುತ್ತಿದ್ದ ಶೆಟ್ಟಿ ಬ್ರಹ್ಮಯ್ಯ ಹಾಗೂ ಅಚಕಬ್ಬೆಯರಿಂದ ತುಂಬಿಗೆಯ ಧಾರ್ಮಿಕ ಸಂಸ್ಥೆಗಳಿಗೆ ನೀಡಿದ್ದನ್ನು ಉಲ್ಲೇಖಿಸುತ್ತದೆ. ಹೀಗಾಗಿ ಕಲ್ಯಾಣದ ಅರಸ ಇರುವೆಬೆಡಂಗನ ಆಳ್ವಿಕೆಯ ಕಾಲದಲ್ಲಿ ತುಂಬಿಗೆಯು ಅಗ್ರಹಾರವಾಗಿತ್ತೆಂದು ಇಲ್ಲಿ ಬ್ರಾಹ್ಮಣರು ವಾಸಿಸುತ್ತದ್ದರೆಂದು ತಿಳಿದು ಬರುತ್ತದೆ. ಕ್ರಿ. ಶ. ೧೧೮೬ ತುಂಬಿಗೆ ಕೋಳುರಿನ ೪ ವಿಕ್ರಮಾದಿತ್ಯನ ತಮದಡ್ಡಿಯ ಕ್ರಿ. ಶ. ೧೦೩೩ ರ ಶಾಸನ ಕುಂಟೋಜಿಯ ೨ ನೇ ಜಯಸಿಂಹನ, ಸರೂರಿನ ಕ್ರಿ. ಶ. ೧೦೩೨ ರ ಹಾಗೂ ಆಲೂರಿನ ಕ್ರಿ. ಶ. ೧೦೪೫ ರ ಒಂದನೇಯ ಸೋಮೇಶ್ವರನ ಶಾಸನ, ಬಿದರಕುಂದಿಯ ಕ್ರಿ. ಶ. ೧೦೩೨ ರ ಒಂದನೇಯ ಜಗದೇಖಮಲ್ಲನ ಶಾಸನ ಬೇಲೂರಿನ ಕ್ರಿ. ಶ. ೧೦೪೫ ರ ಎರಡನೇಯ ಜಗದೇಖಮಲ್ಲನ ಶಾಸನ, ತಾಲೀಕೋಟೆ ಮತ್ತು ಮಿಣಜಗಿಯ ಕ್ರಿ. ಶ. ೧೧೮೪ ರ ಶಾಸನ ೪ನೇಸೋಮೇಶ್ವರನ ಆಳ್ವಿಕೆ ವರೆಗೆ ಅನೇಕ ಶಾಸನಗಳು ಈ ಪ್ರದೇಶಗಳಲ್ಲಿ ಕಂಡು ಬರುತ್ತದೆ. ತುಂಬಿಗೆ ೬ ನೇ ವಿಕ್ರಮಾದಿತ್ಯನ ಆಳ್ವಿಕೆ ಕಾಲದಲ್ಲಿ ತ್ರೈಪುರುಷ ದೇವಾಲಯಕ್ಕೆ ಮಹಾಪ್ರಧಾನ ಸೇರಿ ಸಂಧಿ ವಿಗ್ರಹ, ಮನ್ನೆ, ಪೆರ್ಗಡೆ, ದಂಡನಾಯಕ ನಿಂಬಣ್ಣನಿಂದ ಭೂಮಿ ದಾನ ಮಾಡಿದ ಉಲ್ಲೇಖ ಹಾಗೂ ವಿದ್ಯಾ ಕ್ಷೇತ್ರಕ್ಕೆ ಅರಸರು ಕಾಣಿಕೆ ಹಾಗೂ ದಾನ ದತ್ತಿಗಳನ್ನು ನೀಡಿದ್ದು, ಶಾಸನಗಳು ಉಲ್ಲೇಖುತ್ತವೆ.

ಕುಂಟೋಜಿಯ ಸಂಗಮೇಶ್ವರ ದೇವಾಲಯ (ಈಶ್ವರ) ಭಾವಿ, ಕಲ್ಯಾಣದ ಚಾಲೂಕ್ಯ ಅರಸ ೨ ನೇ ಜಯಸಿಂಹ ಕಾಲದಲ್ಲಿ ರಾಜಧಾನಿ ಪಟ್ಟಲಕ್ಕೇರಿ (ಪಟ್ಟದಕಲ್ಲು) ಆಳ್ವಿಕೆ ಮಾಡುತ್ತದ್ದನೆಂದು ಉಲ್ಲೇಖಿಸುತ್ತದೆ. ಅದೇ ಗ್ರಾಮದ ೨ನೇ ಸೋಮೇಶ್ವರನ ಶಾಸನವು ನೊಳಂಬ ಪಲ್ಲವಕುಟುಂಬದ ಮಹಾಸಾಣಿ ಬಿಲ್ಲರಸನು ನಾಗೀರಭಾವಿಯ (ನಾಗರಬೆಟ್ಟ) ಬಲ್ಲೇಶ್ವರ ದೇವರಿಗೆ ಹಣ ದಾನ ಮಾಡಿದನು ಎಂದು ವಿವರಿಸುತ್ತದೆ. ಈ ಪ್ರದೇಶದ ಕಲ್ಯಾಣದ ಚಾಲುಕ್ಯರ ಎಲ್ಲಾ ಶಾಸನಗಳು ದೇವಾಲಯಗಳ ನಿರ್ಮಾಣ ಪೂಜೆ ಮತ್ತು ಸಾಂಸ್ಕೃತಿಕ ಕಾರ್ಯಗಳಿಗೆ ಹಣ ಉಣ್ಣೆ ಮುಂತಾದವುಗಳನ್ನು ದಾನದತ್ತಿ ನೀಡಿದ್ದನ್ನು ವಿಶ್ಲೇಷಿಸುತ್ತವೆ. ಅಲ್ಲದೆ ಇವರ ಕಾಲದಲ್ಲಿ ಹಲವಾರು ದೇವಾಲಯಗಳು ನಿರ್ಮಾಣಗೊಂಡಿರುತ್ತದೆ.

M.G.V.C. Arts, Commerce & Science College MUDDEBIHAL Dt: Vijayapur

## ದೇವಗಿರಿ ಯಾದವರು :

ಮುದ್ದೇಬಿಹಾಳ ತಾಲೂಕ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ಪ್ರಮುಖ ಮನೆತನದವರೆಂದು ದೇವಗಿರಿ ಯಾದವರು. ಮಹಾರಾಷ್ಟ್ರದ ಔರಂಗಾಬಾದ ಹತ್ತಿರವಿರುವ ದೇವಗಿರಿ ಇವರ ರಾಜಧಾನಿಯಾಗಿದ್ದು. ಇದೊಂದು ಕನ್ನಡ ಮನೆತನವಾಗಿದೆ. ಕಲ್ಯಾಣದ ಚಾಲುಕ್ಯರ ಮಾಂಡಲಿಕರಾಗಿ ನಂತರ ಸ್ವತಂತ್ರ ರಾಜರಾಗಿ ಈ ಪ್ರದೇವನ್ನು ಆಳಿದ್ದಾರೆ. ಯಾದವ ಅರಸರ ಆಳ್ವಿಯನ್ನು ಉಲ್ಲೇಖಿಸುವ ೧೦ ಶಾಸನಗಳು ಮುದ್ದೇಬಿಹಾಳ ತಾಲೂಕಿನ ಲಭ್ಯಿವೆ. ನಾಗೂರಿನ ಕ್ರಿ. ಶ. ೧೨೧೮ ರಿಂದ ೧೨೯೯ ರ ಯಾದವ ಸಿಂಘಣನ ಶಾಸನವು ನಗರದ ಗೌಡರು ಕೇತು ಗುರುಗಳು ಹಾಗೂ ಎಂಟು ಹಿಟ್ಟುರಿಂದಕಲ್ಲು ಕುಟಿಗೆ ಕೇತೋಜನಿಗೆ ಭಮಿದಾನ ನೀಡಿದ ವಿವರಣೆಯನ್ನು ನೀಡುತ್ತದೆ. ಹಳ್ಳುರಿನ ಕ್ರಿ. ಶ. ೧೧೮೮ ರ ಯಾದವ ಬಿಲ್ಲಮನ ಶಾಸನ ಶಿವಾದೇವಾಲಯಕ್ಕೆ ಭೂಮಿ ತೋಟ ಹಾಗೂ ಹಣ ದಾನ ಲಕುಳೇಶ್ವರ ಪಂಡಿತ ದಂಡನಾಯಕ, ವಿಕ್ರಮಾದಿತ್ಯ ವಿಷಯ ಉಲ್ಲೇಖ ಮಾಡುತ್ತದೆ. ಪಡೆಕನೂರದ ಕ್ರಿ. ಶ. ೧೨೫೬/೧೨೫೭ ಯಾದವಕನ್ನರ ದೇವನ ಶಾಸನವು ಶಿದ್ದರಾಮೇಶ್ವರನ ಆಜ್ಞೆ, ವಚನ, ಸೊನ್ನಲಿಗಪುರ ರಾಮನಾಥ ದೇವರಿಗೆ ಬಸರಿಕೊಂಡಿದ (ಬಸರಕೋಡದ) ಮಹಾಪ್ರಭು ದೇಶಿಯ ದಂಡನಾಯಕನಿಗೆ ಪಡಿಯಕನೂರಿನಲ್ಲಿ ಭೂಮಿ ದಾನ ಮಾಡಿದ ವಿವರಣೆಯನ್ನು ನೀಡುತ್ತದೆ. ಬಸರಕೋಡದ ಕ್ರಿ. ಶ. ೮ನೇ ಶತಮಾನದ ಶಾಸನವು ತ್ರುಟಿತಗೊಂಡಿದ್ದು, ವ್ಯಕ್ತಿಯೊಬ್ಬನಿಂದ ಶಿವಾಲಯ ನಿರ್ಮಾಣ ಮಾಡಿದ್ದನ್ನು ಉಲ್ಲೇಖಿಸುತ್ತದೆ. ಇವುಗಳಲ್ಲದೆ (ತುಂಬಿಗೆಯ) ಕ್ರಿ. ಶ. ೧೨೭೭ ರ ಯಾದವ ರಾಮಚಂದ್ರನ ಶಾಸನವು ಬೋಚನಾಯಕನು ನಿಷಿಧಿ ಕಲ್ಲು ನಿಲ್ಲಿಸಿ ಫಾರ್ಶ್ವನಾಥ ದೇವರಿಗೆ ಭೂಮಿದಾನ ಹಾಗೂ ಹರಟಿಗೆನಾಡು ಮತ್ತು ತುಂಬಿಗೆಯ ಪ್ರಭು ಬೊಮ್ಮರಸನ ಉಲ್ಲೇಖವಿದೆ. ಪಿರಾಪುರದ ಕ್ರಿ. ಶ. ೧೧೮೯/೧೧೯೦ ರ ಯಾದವ ಬಿಲ್ಲಣನ ಶಾಸನವು ಮಹಾಪ್ರಧಾನ ಮಗರ ಮುರಾರಿ ಲಕ್ಷ್ಮೀದೇವ ನಾಯಕನ ಮಹಾಮಂಡಲೇಶ್ವರ ವಿರಪ್ಪದೇವನ ಅನೂಮತಿಯಿಂದ ಭೂಮಿ ನಿವೇಶನದ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ.ತಾಳಿಕೋಟೆಯ ಕ್ರಿ. ಶ. ೧೨೨೫ ರ ಯಾದವ ಸಿಂಘಣನ ಶಾಸನವು ಮಹಾಮಾಂಡರಿಕಮುಗರ ಮುರಾರಿ ಜೈತಪಾಳ ನಾಯುಕ ಮತ್ತು ಮಾಣಿಕಾದೇವೆಯವರಿಂದ ತಾಳಿಕೋಟೆಯ ಸೋಮನಾಥ ದೇವರಿಗೆ ಭೂಮಿದಾನ ಮತ್ತು ಅದೇ ಗ್ರಾಮದ ಕ್ರಿ. ಶ. ೧೨ನೇ ಶತಮಾನದ ಸಹಸ್ರಲಿಂಗ ದೇವಾಲಯಕ್ಕೆ ಭೂಮಿ ದಾನ ಮತ್ತು ಪಡೇಕನೂರ ಉಲ್ಲೇಖವಿದೆ. ಯಾದವರು ಕಲ್ಯಾಣದ ಚಾಲುಕ್ಯರ ನಂತರ ಈ ಪ್ರದೇಶದ ಮೇಲೆ ತಮ್ಮ ಆಡಳಿತದ ಅವಧಿಯಲ್ಲಿ ವಿವಿಧ ದೇವಾಲಯಗಳನ್ನು ನಿರ್ಮಿಸಿದ್ದಲದೆ. ದೇವಾಲಯಗಳಿಗೆ ಪೂಜೆ ಪುನಸ್ಕಾರಕ್ಕಾಗಿ ಭೂಮಿ ಮತ್ತು ಹಣ ದಾನ ನೀಡಿದ ವಿವರಣೆಯನ್ನು ನೀಡುತ್ತದೆ.

M.G.V.C. Arts, Commerce & Science College MUDDEBIHAL -586212 Dt: Vijayapur.

## ಕಲಚೂರಿಯರು :

ಈ ತಾಲೂಕ ಪ್ರದೇಶವು ಕಲ್ಯಾಣದ ಚಾಲುಕ್ಯರ ಆಡಳಿತಕ್ಕೆ ಒಳಪಟ್ಟಿತ್ತು ಎಂದು ಹೇಳಲು ಸಾಕಷ್ಟು ಪ್ರಮಾಣದ ಶಾಸನಗಳು ಕಂಡು ಬರುತ್ತವೆ. ಗೋಟಖಿಂಡಕಿ ಕ್ರಿ. ಶ. ೧೧೭೪ ರ ಕಲಚೂರಿ ಸೋವಿದೇವನ ಶಾಸನವು ಅಣುಗ ಸಹಣಾದಿಪತಿ (ನೇನಾಧಿಪತಿ) (ಮಹಾಸಾಮಂತ) ಬೊಮ್ಮದೇವ ದಂಡನಾಯಕ ಅನುಮತಿಯಿಂದ ಗೊಟ್ಟಖಿಂಡಿಯ ಪ್ರಭು ಮಹಾದೇವ ನಾಯಕನ ಮಗ ನಾಗದೇವನಾಯಕನು ಗಂಗೇಶ್ವರ ದೇವರ ಭಾವಿ ಧರ್ಮ ಕಾರ್ಯಕ್ಕೆ ನೀಡಿದ ಭೂಮಿ ಮತ್ತು ನಿವೇಶನ ದಾನದ ಬಗ್ಗೆ ವಿವರಣೆ ನೀಡುತ್ತದೆ. ಜಂಗಮುರಾಳದ ಕ್ರಿ. ಶ. ೧೧೩೭ ರ ಕಲಚೂರಿಸೋವಿದೇವನ ಶಾಸನವು ಮಹಾದೇವ ನಾಯಕನಿಂದ ಮಾಹಾಲಿಂಗ ದೇವರ ಗುಡಿಗೆ ಭೂಮಿ ದಾನವೆಂದು ತಿಳಿಸುತ್ತದೆ. ತಾಳಿಕೋಟಿಯ ಕ್ರಿ. ಶ. ೧೧೮೧ ಕಲಚೂರಿ ಅಹವಮಲ್ಲನ ಶಾಸನವು ರಾಜಾಧಿಕಾರಿ ದಂಡಾನಯಕ ಪದ್ಮರಸನು ಮಹಾಪ್ರಧಾನ ಲಕ್ಷ್ಮೀದೇವರಸನ ಅನುಮತಿಯಿಂದ ಹಗರಟಗಿ ಮುನ್ನೂರು ನಾಡಿನಲ್ಲಿ ಪ್ರತಿ ಹಳ್ಳಿಯಿಂದ ಒಂದು ಹೊನ್ನು ಕೂಡಿಸಿ ತಾಳಿಕೋಟೆಯ ಸೋಮನಾಥ ದೇವರಿಗೆ ದಾನ ನೀಡಿದ ಉಲ್ಲೇಖವನ್ನು ಮಾಡುತ್ತದೆ. ಕಲಚೂರಿಯ ಅರಸರು ಈ ಪ್ರದೇಶದಲ್ಲಿ ಆಳಿಕೆ ಮಾಡಿದ್ದನ್ನು ಶಾಸನಗಳಿಂದ ಉಲ್ಲೇಖ ವ್ಯಕ್ತವಾಗುತ್ತದೆ.

## ನೊಳಂಬರು :

ಈ ಪ್ರದೇಶದಲ್ಲಿ ಆಳಿಕೆ ಮಾಡಿದ ರಾಜ ಮನೆತನಗಳಲ್ಲಿ ನೊಳಂಬ ಮನೆತನವು ರಾಷ್ಟ್ರಕೂಟರು ಮತ್ತು ಕಲ್ಯಾಣದ ಚಾಲುಕ್ಯರ ಸಾಮಂತ ಅರಸರಲ್ಲಿ ಪ್ರಮುಖರು. ನೊಳಂಬ ಪಲ್ಲವರೆಂದುಕರೆಯುತ್ತಾರೆ. ಕ್ರಿ. ಶ. ೮ ನೇ ಶತಮಾನದಲ್ಲಿ ತಮಿಳನಾಡಿನ ಪಲ್ಲವರ ಸಾಮಂತರಾಗಿ ಕಾರ್ಯ ನಿರ್ವಹಿಸಿದ ಇವರು ಬಳ್ಳಾರಿ ಜಿಲ್ಲೆಯ ಉಚ್ಚಂಗಿ ದುರ್ಗವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿ ಕೊಂಡು ಆಳ್ವಿಕೆ ಮಾಡಿದರ ಪ್ರಯುಕ್ತ "ನೋಳಂಬವಾಡಿ ೩೨೦೦" ಎಂದು ಕರೆಯಲಾಗಿದೆ. ಹೊಸಪೇಟೆ ತಾಲೂಕಿನ ಕಂಪಲಿಯು ಇವರ ರಾಜಧಾನಿಗಳಲ್ಲೊಂದು. ಮುದ್ದೇಬಿಹಾಳ ತಾಲೂಕಿನ ಕುಂಟೋಜಿಯ ಕ್ರಿ.ಶ. ೧೦೬೮ ರ ಕಲ್ಯಾಣದ ಚಾಲುಕ್ಯರ ಎರಡನೇಯ ಸೋಮೇಶ್ವರನ ಶಾಸನದ ಪ್ರಕಾರ ನೊಳಂಬ ಪಲ್ಲವ ಕುಟುಂಬದ ಮಹಾಸಾಣಿ ಯಲ್ಲರಸನು ನಾಗರಭಾವಿಯ ಬಲ್ಲೇಶ್ವರ ದೇವರಿಗೆ ಹಣದಾನ ನೀಡಿದ ವಿವರನ್ನು ಹೇಳುತ್ತದೆ.

M.G.V.C. Arts, Commerce & Science College MUDDEBIHAL -586212 Dt: Vijayapur

## ಅಲ್ಲಾವುದ್ದೀನ ಖಿಲ್ಜಿ :

ಮುದ್ದೇಬಿಹಾಳ ತಾಲೂಕಿನ ರಕ್ಕಸಗಿಯ ೧೩೧೦ ರ ಶಾಸನವೊಂದು ಈ ಮನೆತನದ ಬಗ್ಗೆ ಉಲ್ಲೇಖಿಸುತ್ತದೆ. ಆದರೆ ಹೆಚ್ಚಿನ ವಿವರಗಳು ದೊರೆಯುವುದಿಲ್ಲ.

## ಬಿಜಾಪೂರ ಆದಿಲಶಾಹಿಗಳು ಹಾಗೂ ಮರಾಠಾ ಪೇಶ್ವೆಗಳು :

ವಿಜಾಪೂರ ಸುಲ್ತಾನರ ವಶದಲ್ಲಿದ್ದ ಫಲವತ್ತಾದ ಡೋಣಿ ನದಿಯ ಎಡ ಬಲ ದಂಡೆಗಳ ಪ್ರದೇಶಳಿಗಾಗಿ ವಿಜಯನಗರ ಅರಸರಿಗೂ ಹಾಗೂ ಶಾಹಿ ಸುಲ್ತಾನರ ಮಧ್ಯ ಕ್ರಿ. ಶ. ೧೫೬೫ ಜನೇವರಿ ೨೩ ರಂದು ಜರುಗಿದ ಈ ಯುದ್ಧದಲ್ಲಿ ವಿಜಯನಗರದ ಅರಸ ಅಳಿಯ ರಾಮರಾಯ ಸಂಪೂರ್ಣ ಸೋಲನ್ನು ಅನುಭವಿಸಿ ಡೋಣಿ ತೀರದ ತಾಳಿಕೋಟೆ. ಕೃಷ್ಣಾ ನದಿ ತೀರದ ದೋಅಬ್ ಪ್ರದೇಶ ರಾಯಚೂರು ಹಾಗೂ ಮುದಗಲ್ಲ ಕೋಟೆಗಳು ಸುಲ್ತಾನರ ವಶವಾದವು. ತಾಳಿಕೋಟೆ, ನಾಲತವಾಡ ಹಾಗೂ ರಕ್ಕಸಗಿಯಲ್ಲಿ ಪರ್ಶಿಯನ್ ಹಾಗೂ ಅರೆಬಿಕ್ ಭಾಷೆಯಲ್ಲಿ ಶಾಸನಗಳು ಲಭಿಸಿವೆ. ಮತ್ತು ಮರಾಠಾ ಪೇಶ್ವೆಗಳು ಮುದ್ದೇಬಿಹಾಳ ತಾಲೂಕಿನ ಮೇಲೆ ಪ್ರಭಾವ ಕಂಡು ಬರುತ್ತದೆ. ಈ ಕಾರಣದಿಂದಾಗಿ ಹಲವಾರು ದೇವಾಲಯಗಳು ಮಸೀದಿ ಕೋಟೆಗಳು ಬಾವಿಗಳು ಕೆರೆಗಳು ನಿರ್ಮಾಣಗೊಂಡಿವೆ.

## ಶಾಸನೋಕ್ತ ದೇವಾಲಯಗಳು :

ಮುದ್ದೇಬಿಹಾಳ ತಾಲೂಕಿನ ಶಾಸನೋಕ್ತ ದೇವಾಲಯಗಳನ್ನು ಉಲ್ಲೇಖಿಸುವು ದಾದರೆ ಶೈವ ಧರ್ಮದ ೧೫ ದೇವಲಯಗಳು, ವೈಷ್ಣವ ಧರ್ಮದ ೬ ದೇವಾಲಯಗಳು, ಜೈನ ಧರ್ಮದ ೪ ದೇವಾಲಯಗಳು ಇತರೆ ೧೨ ದೇವಾಲಯಗಳು ಹಾಗೂ ೨ ಮಸೀದಿಗಳು ಇಲ್ಲೇಖಿಸುತ್ತವೆ. ಕುಂಟೋಜಿಯ ಸಂಗಮೇಶ್ವರ, ತಾಳಿಕೋಟೆಯ ರಾಮಸ್ವಾಮಿ, ತುಂಬಗಿಯ ರಾಮಲಿಂಗ, ನಾಗೂರ ಈಶ್ವರ, ಪೀರಾಪೂರ ಸಂಗಮೇಶ್ವರ, ಬೇಲೂರಿನ ಶಿವ ದೇವಾಲಯ, ಮಟಕಲದೇವನಹಳ್ಳಿಯ ರಾಮಲಿಂಗ, ಸರೂರದ ಮಲ್ಲಿಕಾರ್ಜುನ, ಹಂಡರಗಲ್ಲಿನ ಸಂಗಮೇಶ್ವರ, ಹೀರೆಮುರಾಳದ ಸಂಗಮೇಶ್ವರ, ಹಿರೂರದ ಶಂಕರಲಿಂಗ, ಹುಲ್ಲೂರದ ರಾಮಲಿಂಗ ದೇವಾಲಯಗಳಿವೆ. ಅಲ್ಲದೆ ಕೋಳುರಿನ ಸ್ವಯಂಭೂ ಮೂಲಸ್ಥಾನ ದೇವಾಲಯ ಇವುಗಳಿಲ್ಲದೆ. ಜೈನ ಸ್ಮಾರಕಗಳು ಗುಂಡಖರ್ಜಗಿ, ಹಂಡರಗಲ್ಲ, ತುಂಬಗಿ. ಹಳ್ಳೂರ, ಮುದ್ದೇಬಿಹಾಳ ಬಸರಕೋಡದ ದೇವಾಲಯಗಳು ಉಲ್ಲೇಖನಾರ್ಹವಾಗಿವೆ. ಪ್ರಮುಖವಾಗಿ ಬಸರಕೋಡದ ತ್ರಿಕೋಟೇಶ್ವರ ದೇವಾಲಯ, ಕುಂಟೋಜಿಯ ಸಂಗಮೇಶ್ವರ ದೇವಾಲಯ ಸರೂರಿನ ಮಲ್ಲಿಕಾರ್ಜುನ (ಏಳು ಗುಡಿ) ಮತ್ತು ಕೋಳೂರಿನ ಈಶ್ವರ ದೇವಾಲಯಗಳ ಬಗ್ಗೆ ಈ ಲೇಖನದಲ್ಲಿ ಸಂಪೂರ್ಣವಾಗಿ ಚರ್ಚಿಸಲಾಗಿದೆ.

M.G.V.C. Arts, Commerce & Science College MUDDEBIHAL -586212 Dt: Vijayapur.

## ಪ್ರಮುಖ ದೇವಾಲಯಗಳು :

### ಕುಂಟೋಜಿ ಸಂಗಮೇಶ್ವರ ದೇವಾಲಯ :

ತಾಲೂಕ ಕೇಂದ್ರದಿಂದ ಪೂರ್ವಕ್ಕೆ ೫ ಕಿ.ಮೀ ದೂರವಿರುವ ಕುಂಟೋಜಿ ಗ್ರಾಮದಲ್ಲಿ ಕಲ್ಯಾಣದ ಚಾಳುಕ್ಯರ ಅರಸ ಎರಡನೇ ಸೋಮೇಶ್ವರ ಕಾಲದಲ್ಲಿ ನಿರ್ಮಿಸಿದಂತಹ ತ್ರಿಕೋಟೇಶ್ವರ ದೇವಾಲಯವಿದೆ. ಪ್ರಸ್ತುತ ದೇವಾಲಯವನ್ನು ಸಂಗಮೇಶ್ವರ ಹಾಗೂ ಬಸವಣ್ಣ ದೇವಾಲಯವೆಂದು ಕರೆಯುತ್ತಾರೆ. ತಲ ವಿನ್ಯಾಸದಲ್ಲಿ ಮೂರು ಗರ್ಭಗೃಹ, ಸುಕನಾಸಿ, ಮುಖಮಂಟಪ ಹೊಂದಿದ್ದು. ಉತ್ತರ ಮತ್ತು ದಕ್ಷಿಣ ಗರ್ಭ ಗೃಹಗಳಲ್ಲಿ ಲಿಂಗಗಳು ಇರುವದಿಲ್ಲ. ಪೂರ್ವಕ್ಕೆ ಮುಖ ಮಾಡಿದ ಗರ್ಭಗೃಹದಲ್ಲಿ ೫ ಅಡಿ ಎತ್ತರದ ಕಪ್ಪುಶಿಲೆಯ ಸೂಕ್ಷ್ಮ ಕೆತ್ತನೆ ಮಾಡಿರುವ ಪಾಣಿ ಪಟ್ಟ್ ಈಶ್ವರ ಲಿಂಗವಿದೆ. ಗರ್ಭಗೃಹದಲ್ಲಿ ದ್ವಾರಶಾಖೆಯು ಅಲಂಕಾರದಿಂದ ಕುಡಿದ್ದು, ಲತಾಪಟ್ಟಿಕೆ, ಲತಾಬಳ್ಳಪಟ್ಟಿ, ಸಿಂಹಾಯಾಳಿ ಪಟ್ಟಿಕೆ ಅಲಂಕೃತ ಅರ್ಧಗಂಭ, ಲಲಾಟ ಬಿಂಬದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ಅಂತರಾಳದ ಎರಡು ಬದಿಗೆ ಸಂಹ ಕೀರ್ತಿ ಮುಖ ಹೊಂದಿದ ಎರಡು ಸುಂದರ ಕಂಬಗಳನ್ನು ಹೊಂದಿದ್ದು ಅದರ ಮೇಲೆ ತೋರಣದಲ್ಲಿ ರಾಮಾಯಣ ಮತ್ತು ಮಹಾಭಾರತಕ್ಕೆ ಸಂಬಂದಿಸಿದ ಸುಂದರವಾದ ಚಿತ್ರಗಳನ್ನು ಕೆತಲಾಗಿದೆ. ಪ್ರಸ್ತುತ ಬಂಗಾರ ಬಣ್ಣ ಲೇಪಿಸಿದ್ದು ಮೂಲ ಅಂದ ಹಾಳಾಗಿದೆ. ಸವರಂಗ ಮಂಟಪದಲ್ಲಿ ನಾಲ್ಕು ಕಂಬಗಳಿದ್ದು ಸೂಕ್ಷ್ಮ ಕೆತ್ತನೆಯಿಂದ ಕೂಡಿದೆ. ಕೆಳಭಾಗದಲ್ಲಿ ಚೌಕಪಟ್ಟಿ ಆಯತಾಕಾರದ ಕೆತ್ತನೆಕಾಂಡಗಳು ಮಧ್ಯದಲ್ಲಿ ಸಿಂಹ ಕೀರ್ತಿ ಮುಖಕಾಂಡಭಾಗ, ಮೇಲೆ ತರಂಗ ಆಕಾರದ ಬೋದಿಗೆಯನ್ನು ಅಲಂಕರಿಸಿದ್ದಾರೆ.

ದೇವಾಲಯದ ಹೊರಗೋಡೆಯ ಅದಿಸ್ಥಾನಭಾನ ನೆಲದಲ್ಲಿ ಮುಚ್ಚಿದ್ದು ಗೋಡೆಲ್ಲಿ ಅರ್ಧಕಂಬಗಳಿಂದ ಕೂಡಿದ ಗೂಡುಗಳಿಗೆ ಅಲ್ಲಿ ಶಿವ, ವಿಷ್ಣು, ಇತರೆ ಮೂರ್ತಿ ಶಿಲ್ಪಗಳನ್ನು ನಿರ್ಮಿಸಿದ್ದಾರೆ. ದೇವಾಲಯದ ಮೇಲೆ ಕದಂಬ ನಾಗರ ಶೈಲಿಯ ಶಿಖರವನ್ನು ಹೊಂದಿದೆ. ಸಂಗಮೇಶ್ವರ ದೇವಾಲಯದ ಮುಂದೆ ಪಶ್ಚಿಮಕ್ಕೆ ಮುಖ ಮಾಡಿದ ನಂದಿ ಮಂಟಪವಿದ್ದು, ೧೭ ಮತ್ತು ೧೮ ನೇ ಶತಮಾನದಲ್ಲಿ ನಿರ್ಮಾಣ ಮಾಡಿದ ಹಾಗೆ ಕಂಡು ಬರುತ್ತದೆ. ಸುಮಾರು ೮ ಅಡಿ ಎತ್ತರದ ಕಪ್ಪು ಶಿಲೆಯಲ್ಲಿ ಕೇತ್ತನೆ ಮಾಡಿದ ನಂದಿ (ಬಸವಣ್ಣ) ಕೂಡಿಸಿದ್ದಾರೆ. ಅದರ ಮುಂದೆ ಮಂಟಪವಿದ್ದು ೮ ಕಂಬಗಳಿವೆ. ಸಂಗಮೇಶ್ವರ ದೇವಾಲಯದ ಕಂಬಗಳಂತೆ ಆಕರ್ಷಣೀಯವಾಗಿ ಮತ್ತು ಸೂಕ್ಷ್ಮವಾಗಿ ಕೆತ್ತನೆ ಮಾಡಲಾಗಿದೆ. ದೇವಾಲಯದ ಮುಖ್ಯ ದ್ವಾರವು ಉತ್ತರಕ್ಕೆ ಮುಖ ಮಾಡಿದೆ.

M.G.V.C. Arts, Commerce & Science College * MUDDEBIHAL-586212

## ಸರೂರದ ಮಲ್ಲಿಕಾರ್ಜುನ ದೇವಾಲಯ (ರೇವಣಸಿದ್ದೇಶ್ವರ ೭ ಗುಡಿ) :

ತಾಲೂಕಾ ಕೇಂದ್ರದಿಂದ ೮ ಕಿ. ಮೀ. ದೂರದಲ್ಲಿ ಸರೂರ ಗ್ರಾಮವಿದೆ. ಗ್ರಾಮದ ಪಶ್ಚಿಮಕ್ಕೆ ೧ ಕಿ. ಮೀ. ದೂರದಲ್ಲಿ ದೇವಣಸಿದ್ದೇಶ್ವರ ದೇವಾಲಯವಿದೆ. ಸ್ಥಳೀಯರು ಇದನ್ನು ೭ ಗುಡಿಯೆಂದು ಕರೆಯುತ್ತಾರೆ. ಪ್ರಸ್ತುತು ಸುಸ್ಥಿಯಲ್ಲಿದ್ದು ದೇವಾಲಯವು ಗ್ರಾಮದ, ಹಾಲ ಮತ ಸಮಾಜದ ಗುರುವಿನ ಮನೆತನದವರು ಪೂಜಿಸುತ್ತಾರೆ. ತಲ ವಿನ್ಯಾಸದಲ್ಲಿ ೫ ಗರ್ಭಗೃಹಗಳು ಅಂತರಾಳಗಳು ಮಂಟಪ. ಮತ್ತೆ ಮಂಟಪ್ಪ ಮತ್ತೆ ಮುಖ ಮಂಟಪವನ್ನು ಹೊಂದಿದೆ. ಪ್ರತಿ ವರ್ಷ ಶಿವರಾತ್ರಿ ಮತ್ತು ಶ್ರವಣ ಮಾಸದಲ್ಲಿ ಜಾತ್ರ ಜರುಗುತ್ತದೆ. ಪ್ರಮುಖ ಗರ್ಭ ಗೃಹದಲ್ಲಿ ಮಲ್ಲಿಕಾರ್ಜುನನೆಂದು ಕರೆಯುವ ಈಶ್ವರ ಲಿಂಗವಿದೆ. ಪಶ್ಚಿಮದ ಗರ್ಭ ಗೃಹದಲ್ಲಿ ರೇವಣಸಿದ್ದೇಶ್ವರ ದೇವರ ನಿಂತ ಶಿಲ್ಪವಿದೆ. ಪೂರ್ವ ಗರ್ಭಗೃಹಗಳಲ್ಲಿ ಈಶ್ವರ ಲಿಂಗಳಿವೆ. ದೇವಾಲಯದ ಮಂಟಪದ ಎರಡು ಬದಿಯಲ್ಲಿ ವಿವಿಧ ಮೂರ್ತಿಗಳನ್ನು ಸಂಗ್ರಹಿಸಿದ್ದಾರೆ. ಸುಮಾರು ೧೨ ಕ್ಕೂ ಹೆಚ್ಚು ಬಕ್ತರ ಶಿಲ್ಪಗಳಿವೆ. ಅವರು ಪದ್ಮಾಸನದ ಮೇಲೆ ಕೈ ಮುಗಿದು ಕುಳಿತಿದ್ದು ತಲೆಯ ಹಿಂದೆ ಜಡೆಯನ್ನು ಗಂಟು ಹಾಕಿ ಕಟ್ಟಿದ ಹಾಗೆ ಕೆತ್ತನೆ ಮಾಡಲಾಗಿದೆ. ಅಂದರೆ ರೇವಣ ಸಿದ್ದೇಶ್ವರ ಭಕ್ತರಗಿ (ಪೂಜಾರಿ) ಕಾರ್ಯ ನಿರ್ವಹಿಸಿ ಕಾಲವಾದ ನಂತರ ಅವರ ಶಿಲ್ಪಗಳನ್ನು ಸ್ಮರಣೆಗಾಗಿ ಕೆತ್ತನೆ ಮಾಡಲಾಗಿದೆ. ಗರ್ಭಗೃಹದ ದ್ವಾರವು ಪಟ್ಟಿಕೆಗಳಿಂದ ಕೆತ್ತನೆ ಮಾಡಲಾಗಿ, ಲಲಾಟ ಬಿಂಬದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ಕೆಳಗಿನ ಭಾಗದಲ್ಲಿ ಶೈವದ್ವಾರ ಪಾಲಕರು ಹಾಗೂ ಚೌರಧಾರಣಿಯರ ಸ್ತ್ರೀಶಿಲ್ಪಗಳಿವೆ.

ದೇವಾಲಯಕ್ಕೆ ಪ್ರಮುಖವಾಗಿ ಎರಡು ಮಂಟಪಗಳಿದ್ದು, ಮಂಟದಲ್ಲಿ ೪ ಕಂಬಗಳು ಮತ್ತೊಂದರಲ್ಲಿ ೪ ಕಂಬಗಳು ಸಾದಾ ಕೆತ್ತನೆಯಿಂದ ಕೂಡಿದೆ. ಮಂಟಪದ ಕಕ್ಷಾಸನದಲ್ಲಿ ೬ ಅರ್ಧ ಭಂಗಗಳನ್ನು ಅಳವಡಿಸಿದ್ದಾರೆ. ದೇವಾಲಯದ ಅಧಿಸ್ಥಾನದ ಭಾಗ ನೆಲದಲ್ಲಿ ಹೋಳಿದ್ದು, ಮೇಲಿನ ಗೋಡೆಯು ಕಟೆದ ಕಲ್ಲುಗಳಿಂದ ನಿರ್ಮಿಸಿದ್ದಾರೆ. ದೇವಾಲಯದ ಮೇಲೆ ಕದಂಬ ನಾಗರ ಶೈಲಿಯ ಶಿಖರವಿದೆ. ಈ ದೇವಾಲಯದ ಮುಂದೆ ಪೂರ್ವಕ್ಕೆ ಮುಖ ಮಾಡಿದ ಎರಡು ಭಕ್ತರ ದೇವಾಲಯಗಳಿವೆ. ಅದರ ಪಕ್ಕದಲ್ಲಿ ಪಶ್ಚಿಮ ಮತ್ತು ಪೂರ್ವಕ್ಕೆ ಮುಖ ಮಾಡಿದ ಎರಡು ದೇವಾಲಯಗಳಿವೆ. ಆ ದಾವಾಲಯದ ಮುಂದೆ ಗದ್ದುಗೆ ಇದ್ದು ಅಲ್ಲಿ ಪಾದುಕೆಗಳಿಗೆ ದೇವಾಲಯಕ್ಕೆ ಸುತ್ತಲೂ ಹೊಸದಾಗಿ ಪ್ರಕಾರ ಗೋಡೆಯನ್ನು ನಿರ್ಮಿಸಿದ್ದಾರೆ. ಮತ್ತು ದೇವಾಲಯದ ಓಳಗಡೆ ೨ ನಾಗ ಕಲ್ಲುಗಳು ಈ ದೇವಾಲಯದ ಪೂರ್ವ ಭಾಗದಲ್ಲಿ ಹೊರಗಡೆ ೧೦ ರಿಂದ ೧೨ ಭಕ್ತರ ದೇವಾಲಯಗಳನ್ನು (ಗೋರಿಗಳನ್ನು) ನಿರ್ಮಿಸಿದ್ದು ಕಾಣಬಹುದಾಗಿದೆ.

M.G.V.C. Arts, Commerce & Science College MUDDEBIHAL -586212 Dt: Vijaypur

**ಬಸರಕೋಡ ಈಶ್ವರ ದೇವಾಲಯ (ದೇಗುಲ) :**

ಮುದ್ದೇಬಿಹಾಳ ತಾಲೂಕಾ ಕೇಂದ್ರದಿಂದ ೧೨ ಕಿ. ಮೀ. ಉತ್ತರಕ್ಕೆ ಬಸರಕೋಡ ಗ್ರಾಮವಿದೆ. ಇಲ್ಲಿ ಕ್ರಿ. ಶ. ೧೧ ಶತಮಾನಕ್ಕೆ ಸೇರಿದ ತ್ರಿಕೂಟೇಶ್ವರ ಶಿವ ದೇವಾಲಯವಿದೆ. ತಲ ವಿನ್ಯಾಸದಲ್ಲಿ ೩ ಗರ್ಭಗೃಹ ಅಂತರಾಳ. ಮಂಟಪ ಮತ್ತು ಮುಖಮಂಟಪ ಹೊಂದಿದೆ. ಪ್ರಮುಖ ಗರ್ಭ ಗೃಹವು ಉತ್ತರಕ್ಕೆ ಮುಖ ಮಾಡಿದ್ದು, ಪಶ್ಚಿಮ ಮತ್ತು ಪೂರ್ವಕ್ಕ ಮುಖ ಮಾಡಿದ ಗರ್ಭಗೃಹಗಳಿಗೆ ೩ ರಲ್ಲಿಯು ೫ ಅಡಿ ಎತ್ತರದ ಪಾಣಿಪಟ್ಟ ಈಶ್ವರ ಲಿಂಗಗಳಿದ್ದು, ಬ್ರಹ್ಮ, ವಿಷ್ಣು, ಮಹೇಶ್ವರರೆಂದು ಕರೆಯುತ್ತಾರೆ. ಸ್ಥಳಿಯರು ಈ ದೇವಾಲಯವನ್ನು ದೇಗುಲವೆಂದು ಕರೆಯುವ ವಾಡಿಕೆ ಇದೆ. ಗರ್ಭಗೃಹದ ದ್ವಾರಶಾಖೆಯಲ್ಲಿ ಸುಂದರವಾದ ಕೆತ್ತನೆಯಿಂದ ಕೂಡಿದ ಪಟ್ಟಿಕೆಗಳು ಇವೆ. ಕೀರ್ತಿ ಮುಖ ಪಟ್ಟಿಗೆ, ತ್ರಿ ಪಟ್ಟಿಕೆ ಸಿಂಹಯಾಳಿ ಪಟ್ಟಿಕೆ, ತೊಲೆಯ ಬಾಗದಲ್ಲಿ, ದ್ವಾರದ ಲಲಾಟ ಬಿಂಬವಿದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ಎರಡು ಬದಿಗೆ ಶೈವ ದ್ವಾರಪಾಲಕ ಶಿಲ್ಪಗಳಿದ್ದು, ಗದೆ, ಶಂಖ, ಅಭಯಹಸ್ತ, ಡಮರೂಗ, ಕೈಯಲ್ಲಿ ಹಿಡಿದಿದ್ದಾರೆ ಎರಡು ಬದಿಯಲ್ಲಿ ಛೌರಾಧಾರೀಣಿಯರ ಸ್ತ್ರೀ ಶಿಲ್ಪಗಳಿವೆ. ಅದರ ಕೆಳಗಡೆ ಹೊಸ್ತಿಲು ಬಾಗದಲ್ಲಿ ಶಂಖನಿಧಿ, ಮತ್ತು ಪದ್ಮನಿಧಿ ಶಿಲ್ಪಗಳನ್ನು ಕೆತ್ತಲಾಗಿದೆ.

ಅಂತರಾಳದಲ್ಲಿ ಎರಡು ಕಂಬಗಳು, ಮಂಟಪದಲ್ಲಿ ೪ ಕಂಬಗಳು ಮುಖಮಂಟಪದಲ್ಲಿ ೪ ಕಕ್ಷಾಸನದಲ್ಲಿ ೪ ಕಂಬಗಳು ಇದ್ದು, ಇವು ಕಪ್ಪು ಶಿಲೆಯಲ್ಲ ಕೆತ್ತನೆ ಮಾಡಲಾಗಿದೆ. ಮಂಟಪದ ಭುವನೇಶ್ವರಿಯಲ್ಲಿ ಹೂವಿನಂತೆ ಅಲಂಕಾರಿಕ ಘಂಟೆಯಾಕಾರದ ಕೆತ್ತನೆ ಬಾಗವಿದೆ. ದೇವಾಲಯದ ಅಧಿಸ್ಥಾನ ಭಾಗವು ೫ ಅಡಿ ಎತ್ತರವಿದ್ದು, ಗಳ, ಪಟ್ಟಿಕೆ, ತ್ರಿಪಟ್ಟಿಕೆ ಅದರಲ್ಲಿ ಸಾದಾ ಅಲಂಕಾರಿಕ ಕೆತ್ತನೆ ಮಾಡಲಾಗಿದೆ. ದೇವಾಲಯದ ಸುತ್ತಲೂ ಗೋಡೆಯು ಕೆಂಪು ಮಿಶ್ರಿತ ಉಸುಕು ಕಲ್ಲುಗಳಿಂದ ನಿರ್ಮಿಸಲಾಗಿದೆ. ಯಾವುದೇ ಅಲಂಕಾರ ಕಂಡು ಬರುವುದಿಲ್ಲ. ದೇವಾಲಯದ ಮೇಲೆ ಶಿಖರ ಇರುವುದಿಲ್ಲ.

**ಕೋಳೂರಿನ ಈಶ್ವರ ದೇವಾಲಯ (ಸ್ವಯಂ ಭೂನಾಥ ದೇವಾಲಯ) :**

ತಾಲೂಕ ಕೇಂದ್ರದಿಂದ ದಕ್ಷಿಣಕ್ಕೆ ೭ ಕಿ. ಮೀ. ದೂರದಲ್ಲಿರುವ ಕೋಳುರು ಅಲ್ಲಿ ಈಶ್ವರ ದೇವಾಲಯವಿದ್ದು, ಸ್ಥಳೀಯರು ದೇಗುಲವೆಂದು ಕರೆಯುತ್ತಾರೆ. ಕೋಳೂರಿ ಕುಂಬಾರ ಮನೆತನದಲ್ಲಿ ಶಿವ ಭಕ್ತರ ಶಿವನ ಸಂಸ್ಕೃತಿ ಸಾರುವ ಕೋಳುರು ಕೊಡಗುಸು ಎಂಬ ಕನ್ನಡ ಗದ್ಯಪಾಠವೆ ಈ ದೇವಾಲಯದ ಐತಿಹಾಸಿಕ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತದೆ. ಈ ದೇವಾಲಯವು ತಲ ವಿನ್ಯಾಸದಲ್ಲಿ ಏಕಕೂಟ ಮಾದರಿ ಹೊಂದಿದ್ದು ಗರ್ಭಗೃಹ, ಸುಕನಾಸಿ, ಮಂಟಪ, ಮುಖಮಂಟಪ

ಹೊಂದಿದೆ. ಗರ್ಭಗೃಹದಲ್ಲಿ ಸುಮಾರು ೫ ಅಡಿ ಎತ್ತರದ ಕಪ್ಪ ಶಿಲೆಯಲ್ಲಿ ಪಾಣಿಪಟ್ಟ ಈಶ್ವರಲಿಂಗವಿದೆ. ಗರ್ಭಗೃಹದ ದ್ವಾರ ಶಾಖೆಯು ತ್ರಿಪಟ್ಟಿಕೆ, ಲತಾಪಟ್ಟಿಕೆ, ಅರ್ಧಗಂಬ ಕೆತ್ತನೆಯಿಂದ ಕೂಡಿದೆ. ಸುಕನಾಸಿಗೆ ದ್ವಾರಭಾಗಿಲವಿದ್ದು ಗರ್ಭಗೃಹಕ್ಕೆ ಬೆಳಕು ಇರಲಿ ಎಂಬ ಉದ್ದೇದಿಂದ ಜಾಲಾಂದ್ರವನ್ನು ಆಳವಡಿಸಿದ್ದಾರೆ ನವರಂಗ ಮಂಟಪದಲ್ಲಿ ೪ ಕಂಬಗಳಿದ್ದು, ಸಾದಾ ಕೆತ್ತನೆಯಿಂದ ಕೂಡಿದೆ. ಮುಖಮಂಟಪಕ್ಕೆ ಮೂರು ದ್ವಾರ ಶಾಖೆಗಳನ್ನು ಹೊಂದಿದ್ದು, ಮುಂದಿನ ದ್ವಾರವು ಬಿದ್ದು ಹೋಗಿದೆ. ದೇವಾಲಯದ ಸುತ್ತಲು ಪ್ರಕಾರ ಗೋಡೆಯನ್ನು ನಿರ್ಮಾ ಮಾಡಲಾಗಿದೆ. ಆದರೆ ದೇವಾಲಯವು ಈಗ ಅವಸಾನದ ಅಂಚಿನಲ್ಲಿದೆ.

**ಇತರೆ ದೇವಾಲಯಗಳು :**

ಬಿದರಕುಂದಿ ಸಂಗಮೇಶ್ವರ ದೇವಾಲಯ ತಲ ವಿನ್ಯಾಸದಲ್ಲಿ ಗರ್ಭಗೃಹ, ಅಂತರಾಲ ಮತ್ತು ಮುಖಮಂಟಪ ಹೊಂದಿದೆ. ಪ್ರತಿ ವರ್ಷ ಯುಗಾದಿಗೆ ಜಾತ್ರೆಯನ್ನು ಆಚರಿಸುತ್ತಾರೆ ಢವಳಗಿ ರಾಮಲಿಂಗ ದೇವಾಲಯ, (ದೇಗುಲ), ಸುತ್ತಲು ಬಿದ್ದು ಹೋಗಿದ್ದು ಗರ್ಭಗೃಹದಲ್ಲಿ ಈಶ್ವರ ಲಿಂಗವಿದೆ. ಮಂಟಪ ಭುವನೇಶ್ವರಿಯಲ್ಲಿ ನವಗೃಹಕ್ಕೆ ಸಂಬಂದಿಸಿದ ಸುಂದರವಾಗಿ ಕೆತ್ತನೆ ಮಾಡಿರುವ ಶಿಲ್ಪಿಗಳಿವೆ. ಹಂಡರಲ್ಲಿನ ಸಂಗಮೇಶ್ವರ ದೇವಾಲಯ ಸಂಪೂರ್ಣ ಹಾಳಾಗಿದ್ದು, ಗರ್ಭಗೃಹ ಮಾತ್ರ ಉಳಿದಿದೆ. ಗರ್ಭ ಗೃಹದಲ್ಲಿ ಈಶ್ವರ ಲಿಂಗವಿದ್ದು. ಮುದ್ದೇಬಿಹಾಳ ಕೋಟೆಯ ಹತ್ತಿರದಲ್ಲಿ ಕಲ್ಯಾಣದ ಚಾಲುಕ್ಯ ಕಾಲದ ಈಶ್ವರ ದೇವಾಲಯವಿದ್ದು, ಗರ್ಭಗೃಹ ಮಾತ್ರ ಉಳಿದು ಕೊಂಡಿದೆ. ಗರ್ಭಗೃಹದಲ್ಲಿ ಈಶ್ವರ ಲಿಂಗವಿದ್ದು, ಇತ್ತಚಿಗೆ ದೇವಾಲಯವನ್ನು ಅಳವಡಿಸಿ ಕೊಂಡು ಮೂಲ ವಿನ್ಯಾಸಕ್ಕೆ ದಕ್ಕೆ ಬರದಂತೆ ಸಭಾ ಮಂಟಪವನ್ನು ನಿಮಿಸಲಾಗಿದೆ. ಇನ್ನು ಹಲವಾರು ದೇವಾಲಯಗಳು ಶಾಸನಗಳಲ್ಲಿ ಉಲ್ಲೇಖನಗೊಂಡಿವರು ಆ ದೇವಾಲಯಗಳು ಮೂಲ ಸ್ಥಿತಿಯನ್ನು ಕಳೆದುಕೊಂಡಿವೆ.

■■

**ಆಧಾರ ಗ್ರಂಥಗಳು :**


- ಡಾ॥ ಎಮ್. ಎಮ್. ಕಲಬುರ್ಗಿ – ವಿಜಯಪುರ ಜಿಲ್ಲೆಯ ಶಾಸನ ಸೂಚಿ.
- ಡಾ॥ ಆರ್. ಮುನಿಸ್ವಾಮಿ – ವಿಜಯಪುರ ಜಿಲ್ಲೆಯ ಗೇಜೆಟಿಯರ್.
- ಡಾ॥ ಜೆ. ಎಂ. ನಾಗಯ್ಯ – ೬ನೇ ವಿಕ್ರಮಾದಿತ್ಯನ ಶಾಸನಗಳು.
- ಪ್ರೋ. ಸಿದ್ದರಾಜ ಪೂಜಾರ್ ಮತ್ತು ಜಯಮವಂತ ಕಾಡದೇವರ – ಬೆಳವಲದ ಬೆಡಗು.
- ಡಾ॥ ಡಿ. ವಿ. ಪರಶಿವಮೂರ್ತಿ – "ಸಾಹಿತ್ಯ ಕರ್ನಾಟಕ".
- ಪ್ರೋ. ಸೈರ್ಯನಾಥ ಕಾಮತ (ಸಂ) – "ಇತಿಹಾಸದ ದರ್ಶನ ಸಂಪುಟ ೧೮.
- ಡಾ॥ ಆರ್. ಎಚ್. ಸಜ್ಜನ – ಕ್ಷೇತ್ರ ಕಾರ್ಯ ( ಸಮೀಕ್ಷೆ).



ಬಹುತ್ವ ಮತ್ತು ಒಕ್ಕೂಟ ವ್ಯವಸ್ಥೆಯ ಪರಿಕಲ್ಪನೆಯನ್ನು ಇನ್ನೂ ವಿಸ್ತಾರವಾಗಿ ನೋಡುವ ಆಶಯವನ್ನು ಡಾ. ಪ್ರಕಾಶ ನರಗುಂದರು ಈ 'ಮುತ್ತಿನ ತೆನೆ'ಯ ಮೂಲಕ ಪ್ರಕಟಿಸಿದ್ದಾರೆ. ಇಲ್ಲಿನ ಎಲ್ಲಾ ಲೇಖನಗಳೂ ಸಮುದಾಯಕ್ಕೆ ಅಗತ್ಯವಿರುವ ಜ್ಞಾನ ವಿಸ್ತರಣೆಯ ದೂರದೃಷ್ಟಿತ್ವವನ್ನು ನಿರೂಪಿಸುತ್ತವೆ. ಜ್ಞಾನಾಂತಿಕ ಒಲವುಗಳ ಸಂಕಥನವೇ ಆಗಿದೆ ಈ 'ಮುತ್ತಿನ ತೆನೆ'. ಸಂಶೋಧನಾ ವಿದ್ಯಾರ್ಥಿಗಳ ಆಕರ ಗ್ರಂಥವಾಗಿಯೂ, ಸಂಸ್ಕೃತಿ ಚಿಂತಕರ ಜ್ಞಾನ ಸೆಲೆಯಾಗಿಯೂ ಈ ಸಂಪಾದನೆ ಮೂಡಿ ಬಂದಿದೆ. ಡಾ.ಪ್ರಕಾಶ ನರಗುಂದ ಅವರ ಈ ಶ್ರಮ ಅಭಿನಂದನಾರ್ಹ.

– ಡಾ. ರಾಜಶೇಖರ ಚಂದ್ರಶೇಖರ ಕಂಬಾರ



ISBN : 978-81-947130-3-6